# ಕಮೂ ಕಂಡಂತೆ ಕೋವಿಡ್ ಕಾಲಕನ್ನಡಿ



ಈ ಕಥಾನಕದಲ್ಲಿ ವರ್ಣಿಸಿರುವ ಅಸಾಮಾನ್ಯವಾದ ಘಟನೆಗಳು 202–ರಲ್ಲಿ ಬೆಂಗಳೂರು ಎಂಬ ನಗರದಲ್ಲಿ ನಡೆದವು. ಹಾಗೆ ನೋಡಿದರೆ ಇವೇ ಇವೇ ಘಟನೆಗಳು ಜಗತ್ತಿನ ಹಲವು ಭಾಗಗಳಲ್ಲೂ ಆವರ್ತನಗೊಂಡವು. ಆದರೆ, ಈ ಊರಿನ ಸಂಗತಿಗಳಲ್ಲಿ ಜನ ಏನೋ ವಿಶೇಷವನ್ನು ಕಂಡರು. ಹಿಮಾಲಯದಂತಹ ಹಿಮಾಲಯವನ್ನೂ ಮಿಕ್ಕ ಕಡೆ ಸುತ್ತುವರಿದ ಸಮುದ್ರವನ್ನೂ ಕಾಲುಕಸ ಮಾಡಿ ದಾಳಿಯಿಟ್ಟ ಯಾವುದೋ ಅಲೆಯೇ ಭಾರತದಲ್ಲಿ –ಹಾಗೆಯೇ ಬೆಂಗಳೂರಿನಲ್ಲಿ ಕೂಡ– ನಡೆಯಬಾರದ್ದೆಲ್ಲವೂ ನಡೆಯಲು ಕಾರಣವೆಂದು ಅವರು ನಂಬಿದರು. ಅಂದಹಾಗೆ, ಈ ಊರು ದಕ್ಷಿಣ ಭಾರತದ ಬಹುದೊಡ್ಡ ನಗರ. ಕರ್ನಾಟಕ ಪ್ರಾಂತದ ರಾಜಧಾನಿಯೂ ಹೌದು.

ಎಲ್ಲಕ್ಕೂ ಮೊದಲು ನಾವು ಒಂದು ಮಾತನ್ನು ಒಪ್ಪಲೇಬೇಕು. ಇದು ಅತಿಯಾದ ಸಂಚಾರ ದಟ್ಟಣೆಯ ಊರು. ಸಂಜೆಯ ಹೊತ್ತಿನಲ್ಲಿ ವಾಹನಗಳು ಇಂಚಿಂಚು ಮುಂದೆ ಸಾಗಲೂ ಕುಯ್ಯೊ ಮರ್‍ರೊ ಎನ್ನುವಷ್ಟು ದಟ್ಟಣೆ. ಉದ್ಯಾನನಗರಿ ಎಂಬ ಭ್ರಾಮಕ ಕಿರೀಟ ಹೊತ್ತು ಮೆರೆಯುತ್ತಿರುವ ಈ ಊರಿಗೆ ಲೆಕ್ಕವಿಲ್ಲದಷ್ಟು ಮರಗಳನ್ನು ಕಳಕೊಂಡಿದ್ದು ಮರೆತೇಹೋಗಿದೆ. ವಿಜ್ಞಾನನಗರಿ ಎಂಬ ಧಿಮಾಕು ಬೇರೆ. ಮುಗಿಲಿಗೆ ಒಂದೇ ಸಮನೆ ಏರಿ ಹೋಗುತ್ತಿರುವ ಇಂಗಾಲವನ್ನು ತಹಬಂದಿಗೆ ತರುವ ಒಂದು ತಂತ್ರಜ್ಞಾನವೂ ಇದರ ಬಳಿ ಇಲ್ಲ. ಆದರೂ ಈ ಊರು ವಾತಾವರಣವನ್ನು ನಿತ್ಯ ಮಾಲಿನ್ಯಗೊಳಿಸದೆ ಬಿಟ್ಟಿಲ್ಲ. ಅದರ ಪ್ರಭಾವ ಎಷ್ಟೆಂದರೆ, ರಸ್ತೆಬದಿಯ ಮರಗಳ ಎಲೆಗಳು ಸಹ ಕಪ್ಪಿಟ್ಟಿವೆ. ಜಗತ್ತಿನ ಇತರ ನಗರಗಳಿಗಿಂತ ಇದು ಹೇಗೆ ಭಿನ್ನ ಎಂದು ಅರಿಯಲು ನಿಮಗೆ ಸ್ವಲ್ಪ ಸಮಯಬೇಕು. ನೂರಾರು ಕೆರೆಗಳನ್ನು ಕಳಕೊಂಡ, ಮಳೆನೀರಿನ ಕಾಲುವೆಯಲ್ಲಿ ಕೊಚ್ಚೆ ಹರಿಸಿದ, ಗುಬ್ಬಚ್ಚಿಗಳ ಸದ್ದನ್ನು ಇಲ್ಲವೇ ಇಲ್ಲ ಎನ್ನುವಷ್ಟು ಅಡಗಿಸಿದ, ತನ್ನ ತೆಕ್ಕೆಯಲ್ಲೇ ಕಸದ ಬೆಟ್ಟ ಒಟ್ಟಿಕೊಂಡ ಊರನ್ನು ಕಣ್ಣೆದುರಿಗೆ ತಂದುಕೊಳ್ಳುವುದು ಹೇಗೆ?

ಗೊಂಬೆಯ ಬೆನ್ನಹಿಂದಿನ ಕೀ ತಿರುವಿ ಕೈಬಿಟ್ಟಂತೆ ಈ ಊರಿನ ಚಟುವಟಿಕೆಗಳಿಗೋ ಸದಾ ಧಾವಂತ. ಮಾರುಕಟ್ಟೆಗಳಲ್ಲಿ ಯಾವಾಗಲೂ ಗಜಿಬಿಜಿ. ಎಲ್ಲ ಕಾಲದಲ್ಲೂ ಎಲ್ಲ ಋತುಮಾನಗಳ ಹೂವುಗಳೂ ಇಲ್ಲಿ ಸಿಗುವುದು ಒಂದು ಸೋಜಿಗ. ಇಲ್ಲಿ ಋತುಗಳು ಬದಲಾಗಿದ್ದು ಜನರ ವರ್ತನೆಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ಉದಾಹರಣೆಗೆ, ಚಳಿಗಾಲದ ರಾತ್ರಿಗಳಲ್ಲೂ –ಬೇಸಿಗೆಯಲ್ಲಿ ತಿನ್ನುವಂತೆಯೇ– ಜನ ಮುಗಿಬಿದ್ದು 'ಲೇಕ್‌ವ್ಯೂ' ಐಸ್‌ಕ್ರೀಂ ತಿನ್ನುತ್ತಾರೆ. ಆದರೆ, ಋತು ಬದಲಾಗಿರುವುದು ದೊಡ್ಡ ದೊಡ್ಡ ಮಾಲ್‌ಗಳ ಬಟ್ಟೆ ಅಂಗಡಿಗಳಲ್ಲಿ ಎದ್ದು ಕಾಣುತ್ತದೆ. ತೋಳಿಲ್ಲದ, ಜಾಳುಜಾಳಾದ ಹತ್ತಿ ಉಡುಪುಗಳು ಪ್ರದರ್ಶನಕ್ಕೆ ಇವೆಯೆಂದರೆ ಬೇಸಿಗೆ ಬಂದಿದೆ ಎಂದೂ ರೇನ್‌ಕೋಟ್‌ಗಳು ಕಾಣಲಾರಂಭಿಸಿದರೆ ಮಳೆಗಾಲ ಶುರುವಾಗಿದೆ ಎಂದೂ ಪ್ರದರ್ಶನದ ಗೊಂಬೆಗಳನ್ನು ಸ್ವೆಟರ್, ಉಣ್ಣೆ ಉಡುಪುಗಳು ಅಲಂಕರಿಸಿದ್ದರೆ ಚಳಿಗಾಲದ ಸೂಚಕ ಎಂದೂ ಧಾರಾಳವಾಗಿ ಅರ್ಥೈಸಬಹುದು.

ವಸಂತದ ಆಗಮನವನ್ನು ಖಚಿತಪಡಿಸಿಕೊಳ್ಳಲು ಈ ಊರಿಗೆ ಹಲವು ದಾರಿಗಳಿವೆ. ಗುಲ್‌ಮೊಹರ್ ಗಿಡಗಳು ತಾವಿರುವ ಬೀದಿಗಳಿಗೆ ಆಗ ಕೆಂಪುಬಣ್ಣದ ಚಪ್ಪರವನ್ನು ಹಾಕಿಬಿಡುತ್ತವೆ. ಇನ್ನು ಕೆಲವು ಕಡೆ ನಸುಕಿನಲ್ಲಿ ಕೋಗಿಲೆಗಳು ಇಂಪಾಗಿ ಹಾಡುತ್ತವೆ. ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನ ಮರಗಳು ಹೊಸ ಚಿಗುರನ್ನು ಮೂಡಿಸಿಕೊಂಡು ಉಲ್ಲಾಸ ಹಂಚಿಕೊಳ್ಳುತ್ತವೆ. ಅಷ್ಟೇ ಅಲ್ಲ, ಮಲ್ಲಿಗೆ ಪರಿಮಳದ ಕರಗ ಕೂಡ ವಸಂತ ಋತು ಬಂದಿರುವುದನ್ನು ನೆನಪು ಮಾಡಿಕೊಡುತ್ತದೆ. ಬೇಸಿಗೆಯ ಸೂರ್ಯ ಇಲ್ಲಿ ಮನೆಯನ್ನು ಆವಿಗೆಯೊಳಗಿನ ಇಟ್ಟಿಗೆಯಂತೆ ಸುಡುವುದಿಲ್ಲವೇನೋ ನಿಜ. ಹಾಗಂತ ಸುಮ್ಮನೆಯೂ ಬಿಡುವುದಿಲ್ಲ. ವಾರ್ಷಿಕ 50ಕ್ಕಿಂತ ಹೆಚ್ಚು ಮಳೆ ದಿನಗಳನ್ನು ಕಾಣುವ ಈ ಊರಿನಲ್ಲಿ ಒಮ್ಮೊಮ್ಮೆ ರಸ್ತೆಗಳೇ ಹೊಳೆಗಳಾಗುತ್ತವೆ. ಅದೇ ಚಳಿಗಾಲದ ಕುರಿತು ಹೇಳಿಕೊಳ್ಳುವಂಥ ಆಕ್ಷೇಪ ಯಾವುದೂ ಇಲ್ಲಿನ ಜನರಿಗಿಲ್ಲ. ಮೂಡಣ ಗಾಳಿಗೆ ಮೈಚರ್ಮ ಬಿರುಕುಬಿಡುತ್ತದೆ ಎಂಬ ಗೊಣಗಾಟ ಎಲ್ಲ ಊರುಗಳಲ್ಲೂ ಇದ್ದದ್ದೆ ಅಲ್ಲವೇ?

'ಯಾವುದೇ ಊರಿನ ನಿಜವಾಗಿ ಪರಿಚಯವಾಗುವ ಸುಲಭದ ದಾರಿಯೆಂದರೆ, ಅಲ್ಲಿರುವ ಜನ ಹೇಗೆ ಕೆಲಸ ಮಾಡುತ್ತಾರೆ, ಹೇಗೆ ಪ್ರೀತಿಸುತ್ತಾರೆ ಹಾಗೂ ಹೇಗೆ ಸಾಯುತ್ತಾರೆ ಎಂದು ತಿಳಿದುಕೊಳ್ಳುವುದು' ಎಂಬ ನಿಯಮ ಇಲ್ಲಿ ಪೂರ್ಣವಾಗಿ ಅನ್ವಯವಾಗದು. ಗಾರ್ಮೆಂಟ್ ಫ್ಯಾಕ್ಟರಿಗಳೆಂಬ ದೊಡ್ಡಿಗಳಲ್ಲಿ ದುಡಿಯುವ ಕಾರ್ಮಿಕರನ್ನೂ ಝಗಮಗಿಸುವ ಐ.ಟಿ ಲೋಕದಲ್ಲಿ ಮಿನುಗುವ ಎಂಜಿನಿಯರ್‌ಗಳನ್ನೂ ಹೇಗೆ ಒಂದೇ ತಕ್ಕಡಿಯಲ್ಲಿಟ್ಟು ತೂಗುತ್ತೀರಿ? ಹಾಗೆಯೇ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳನ್ನೂ ಗುಜರಿಯಿಂದ ಥರಾವರಿ ಯಂತ್ರೋಪಕರಣ ಸೃಷ್ಟಿಸುವ ಶಿವಾಜಿನಗರದ ಮುಸಲ್ಮಾನರನ್ನೂ ಹೇಗೆ ಒಂದೇ ಮಾನದಂಡದಿಂದ ನೋಡುತ್ತೀರಿ? ಇಂಗ್ಲಿಷ್, ಹಿಂದಿ, ಉರ್ದು, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಆಫ್ರಿಕಾದ ಗೋಂಬಾ, ಹಾಜಾ, ಲುಫು ಮೊದಲಾದ ಭಾಷೆಗಳನ್ನೂ ಹಲವಾರು ಶೇಡ್‌ಗಳಲ್ಲಿ ಕನ್ನಡವನ್ನೂ ಮಾತನಾಡುವವರ ಸಂತೆಯಲ್ಲಿ (ಎಲ್ಲೆಲ್ಲಿಂದ ಇಲ್ಲಿಗೆ ವಲಸೆ ಬಂದಿದ್ದಾರೆ ಎನ್ನುವುದನ್ನು ನೀವೇ ಲೆಕ್ಕಹಾಕಿ!) ಗೆರೆ ಕೊರೆದಂತೆ 'ಇದು ಹೀಗೇ' ಎಂದು